ಊರಿನ ಬಸ್ ನಿಲ್ದಾಣದ ಹತ್ತಿರ ಹುಣಸೆ ಗಿಡಗಳ ನೆರಳಿನಲ್ಲಿ ತಮ್ಮ ಆಟ ಪ್ರಾರಂಭಿಸುತ್ತಿದ್ದರು. ಮಾಂತ್ರಿಕ ಹಾಗೂ ದೈಹಿಕ ಕಸರತ್ತುಗಳನ್ನು ಮಾಡಿ, ಸೇರಿಸಿ ಜನರನ್ನು ನಿಬ್ಬೆರಗುಗೊಳಿಸಿ ಪುಡಿಗಾಸು ಗಳಿಸುತ್ತಿದ್ದರು. ಅವರ ಹತ್ತಿರ ದುಂಡಾದ ಮೂರು ನಾಲ್ಕು ಬಿದಿರಿನ ಬುಟ್ಟಿಗಳಿರುತ್ತಿದ್ದವು. ಅವುಗಳಲ್ಲಿ ಬೇರೆ ಬೇರೆ ಜಾತಿಯ ಹಾವುಗಳನ್ನು ಇಟ್ಟಿರುತ್ತಿದ್ದರು. ಒಂದೆರಡು ಉದ್ದವಾದ ಕೋಲು, ಸ್ವಲ್ಪ ಕೆಂಪು ಬಟ್ಟೆ, ಒಂದಿಷ್ಟು ಕವಡೆಗಳು, ವಿವಿಧ ಔಷಧಿ ಬೇರುಗಳು, ಸಳಿಯಿಂದ ತಯಾರಿಸಿದ ಮೂರು ರಿಂಗು, ಪುಂಗಿ ಮತ್ತು ಜನರನ್ನು ಸೆಳೆಯಲು ಡೋಲು ಇರುತ್ತಿದ್ದವು. ಇವೆಲ್ಲವುಗಳ ಜೊತೆಗೆ ಬಹು ಮುಖ್ಯವಾದ ವಸ್ತುವೆಂದರೆ ಮನುಷ್ಯನ ತಲೆಬುರುಡೆ. ಇದರ ಮುಂದೆ ಮಂತ್ರ ಬರೆದ ಸಣ್ಣ ಫೋಟೊ ಇಟ್ಟು, ಅದರ ಮೇಲೆ ಹಸ್ತದ ಮೂಳೆಯನ್ನು ಬುರುಡೆಯ ಜೊತೆ ಮಾಡಿ ಆಟ ಪ್ರಾರಂಭಿಸುತ್ತಿದ್ದರು. ಕಣ್ಣಿರುವ ಭಾಗದಲ್ಲಿ ಬರೀ ತೂತುಗಳಂತಿರುವ ಭಗ್ನ ಹಲ್ಲುಗಳ ತಲೆಬುರುಡೆಯನ್ನು ಕಂಡು ನನ್ನಂಥ ಹುಡುಗರೆಲ್ಲ ಹೆದರುತ್ತಿದ್ದೆವು. ಆದರೂ ಹಾವಾಡಿಗರು ಮಾಡುವ ವಿಚಿತ್ರ ಕಸರತ್ತುಗಳನ್ನು ಕುತೂಹಲದಿಂದ ದೊಡ್ಡವರ ಪಕ್ಕದಲ್ಲಿ ನಿಂತು ನೋಡುತ್ತಿದೆವು. ಬರುಡೆಯ ಮುಂದಿರುವುದು ಹಸ್ತದ ಮಣಿಕಟ್ಟೆಂದೂ ಅದನ್ನು ಸ್ಮಶಾನದೊಳಗೆ ಹೋಗಿ ರಾತ್ರಿ ತಂದಿರುತ್ತಾರೆಂದೂ ದೊಡ್ಡವರು ಹೇಳುತ್ತಿದ್ದರು. ಜಾದೂಗಾರರು ಎಡಮುರಿ ಬೆತ್ತವನ್ನು ಕೈಯಲ್ಲಿ ಹಿಡಿದುಕೊಂಡು ಏರು ಧ್ವನಿಯಲ್ಲಿ ಮಾತನಾಡುತ್ತಾ ಆಟ ತೋರಿಸುತ್ತಿದ್ದರು. ತಮ್ಮ ಕಾರ್ಯಸಿದ್ಧಿಗಾಗಿ ಜಾದೂಗಾರನೂ ಬುರುಡೆಯ ನೆತ್ತಿಗೆ ಬಾಣಂತಿ ಹಸ್ತದಿಂದ ಹೊಡೆದು, "ಏ ಸುಡುಗಾಡ!... ಏ ಪಿಶಾಚಿ!... ಓಂ ಹ್ರೀಂ ಕ್ಲೀಂ ಸ್ವವಾ!!" ಎಂದು ಏನೇನೊ ಮಂತ್ರ ಪಟಪಟನೆ ಅಂದುಕೊಳ್ಳುತ್ತಾ ತಾವು ಮಾಡುತ್ತಿದ್ದ ಕಸರತ್ತುಗಳಿಗೆ ರಂಗೇರಿಸುತ್ತಿದ್ದರು. ಆಟ ನೋಡಲು ಕುಳಿತ ಒಬ್ಬ ಹುಡುಗನನ್ನು ಕರೆದು ಅವನ ಕೈಯಲ್ಲಿ ಕಲ್ಲಿನ ಸಣ್ಣ ಹರಳನ್ನು ಇಟ್ಟು, ಮುಷ್ಟಿ ಬಿಗಿ ಮಾಡಲು ಹೇಳಿ, ಒಂದು ಕ್ಷಣದಲ್ಲಿ ಯಾವುದೊ ಮಂತ್ರ ಹೇಳಿ ಮುಷ್ಟಿ ಬಿಚ್ಚಲು ಹೇಳದಾಗ ಅಲ್ಲಿ ಕಾಣುತ್ತಿದ್ದುದು ಜೀವಂತ ಚೇಳು! ಮತ್ತೆ ಮುಂದುವರಿದ ಆಟದಲ್ಲಿ ಕಾಗದದ ಸಣ್ಣ ಸಣ್ಣ ಚೂರು ಮಾಡಿ ಅವನ್ನು ಹುಡುಗನೊಬ್ಬನ ಟವೆಲ್ಲಿಗೆ ಹಾಕಿ, ಮಂತ್ರ ಪಠಿಸುತ್ತಿದ್ದರೆ ಟವೆಲ್ಲು ಬಿಚ್ಚಿ ನೋಡಿದಾಗ ಅಲ್ಲಿ ಕಾಣತ್ತಿದ್ದುದು ಚುರುಮುರಿಯ ಚೂಡಾ. ಹೀಗೆ ಅವರು ಅನೇಕ ಕಣ್ಕಟ್ಟಿನ ಕೆಲಸ ಮಾಡುತ್ತಿದ್ದರು. ಅವರ ಎಲ್ಲ ಸಾಧನಾ ಸಿದ್ಧಿಗಳಿಗೆ ಆ ತಲೆಬುರುಡೆ, ಬಾಣಂತಿ ಹಸ್ತ ಮತ್ತು ಎಡ ಮುರಿಗೆ ಬೆತ್ತವೇ ಕಾರಣವೆಂದು ಹಿರಿಯರು ಮಾತಾಡುತ್ತಿದ್ದರು.

ಪ್ರತಿ ಜೀವಿಗೂ ತಲೆಬುರುಡೆ ಇದ್ದೇ ಇರುತ್ತದೆ. ಆ ಜೀವಿಯ ದೇಹದ ಗಾತ್ರಕ್ಕನುಸಾರವಾಗಿ ಬುರುಡೆ ರಚನೆಯಾಗಿರುತ್ತದೆ. ಗಟ್ಟಿ ಮೂಳೆಯ ಚಿಪ್ಪಿನೊಳಗಿದ್ದ ಮೆದುಳು ಆ ಜೀವಿಯ ಚಲನವಲನವನ್ನು ಸದಾ ನಿಯಂತ್ರಿಸುತ್ತಿರುತ್ತದೆ. ಮನುಷ್ಯನ ಬುರುಡೆಯು ಸಾಮಾನ್ಯವಾಗಿ ಒಂದೇ ತೆರನಾಗಿದ್ದರೂ ಆ ಬುರುಡೆಯೊಳಗಿದ್ದ ಬುದ್ಧಿ ಭಿನ್ನ ಭಿನ್ನ. ಒಬ್ಬರು ತೀಕ್ಷ್ಣ ಬುದ್ಧಿಯ ಬುರುಡೆ ಹೊಂದಿದ್ದರೆ, ಇನ್ನು ಕೆಲವರು ಮಂದಬುದ್ಧಿಯ ಬುರುಡೆಯವರಾಗಿರುತ್ತಾರೆ. ಇನ್ನು ಕೆಲವರು ಪೋಷಕಾಂಶಗಳ ಕೊರತೆಯಿಂದ ಹುಚ್ಚು ಬುರುಡೆಯನ್ನು ಹೊಂದಿರುತ್ತಾರೆ. ಕೆಲವರು ಯಾವುದೇ ವಿಷಯವನ್ನು ಬೇಗ ತಿಳಿದುಕೊಳ್ಳುತ್ತಾರೆ. ಕೆಲವರಿಗೆ ಏನು ಹೇಳಿದರೂ ಎಷ್ಟು ಬಾರಿ ಹೇಳಿದರೂ ತಿಳಿಯುವುದೇ ಇಲ್ಲ. ಆಗ ತಿಳಿಸಿ ಹೇಳುವ ವ್ಯಕ್ತಿಗೆ ಬೇಸರ ಬಂದು, "ಏನ್ ನಿನ್ನ ತಲಿಬುರುಡ್ಯಾಗ ಬರೀ ನುಚ್ಚ ತುಂಬ್ಯಾದೇನ್? ಎಷ್ಟ ಸರ್ತಿ ಹೇಳ್ಬೇಕು ನಿನಗೆ?" ಎಂದು ದಬಾಯಿಸಿ ತಮ್ಮ ಅಸಮಾಧಾನವನ್ನು ತೋರಿಸಬಹುದು. ಕೆಲವರು ಹೇಳಿದ ವಿಷಯ ನಿಧಾನವಾಗಿ ಅರ್ಥಮಾಡಿಕೊಳ್ಳುವುದುಂಟು. ಆಗ, "ನಿನ್ನ ಬುರುಡೆ ಟ್ಯೂಬ್‌ಲೈಟ್ ಇದ್ದಾಂಗ ನೋಡಪಾ... ಬೇಗನೆ ಹತ್ತುದಿಲ್ಲ ನೋಡ್" ಎಂದು ಅಪಹಾಸ್ಯ ಮಾಡಿ ಛೇಡಿಸುವುದುಂಟು. 'ಬುರುಡೆ... ಬುರುಡೆ... ಎಲ್ಲಾರ ಬುರುಡೆಯೂ